ಅರ್ಜಿ ಸಲ್ಲಿಸಿದ ಮೇರೆಗೆ ದಿನಾಂಕಃ07-04-2021ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್ -19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಸಿ.ಕೆ ವಕೀಲರಿಂದಃ**

ನಾನು ಸನ್ 2005 ರಿಂದ ಸದರಿ ಶಿಕ್ಷಣ ಸಮಿತಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಾ ಇದ್ದೇನೆ. ದಿಃ 27-10-2018 ರಂದು ಶನಿವಾರ ಇದ್ದ ಕಾರಣ ಶಾಲೆ ಮುಗಿದ ನಂತರ ನಮ್ಮ ಶಾಲೆಯ ಮುಖೋಪಾಧ್ಯಯರು ಕೊನೆಯದಾಗಿ ಕೀಲಿ ಹಾಕಿರುತ್ತಾರೆ . ದಿಃ 28-10-2018 ಭಾನುವಾರದಂದು ಶಾಲೆಯ ಬೋರ್ವೆಲ್ ಕೆಟ್ಟ ಕಾರಣ ನಾನು ಶಾಲೆಗೆ ಹೋಗಿದ್ದೆ ರಿಪೇರಿ ಮುಗಿಸಿಕೊಂಡ ಮೇಲೆ ಕೀಲಿ ಹಾಕಿ ಕೊಂಡು ಬಂದಿರುತ್ತೇನೆ. ನನ್ನ ಜೊತೆ ಬೋರ್ವೆಲ್ ರಿಪೇರಿ ಮಾಡುವವರು ದಿಳ್ಳೆಪ್ಪ ದೊಡ್ಡಚಿಕ್ಕಣ್ಣನವರು ಕೂಡಾ ಬಂದಿದ್ದರು . ನಾನು 8 ನೇ ರೂಂ ನ ಕೀಲಿ ತೆಗೆದು ಬೋರ್ವೆಲ್ ರಿಪೇರಿ ಮಾಡಿಸಿ ಎಲ್ಲಾ ಸಾಮಗ್ರಿಗಳನ್ನು ಅಲ್ಲೆ ಇಟ್ಟು ಕೀಲಿ ಹಾಕಿಕೊಂಡು ಬಂದಿರುತ್ತೇನೆ . ನಾನು ರೂಂ ನಂಬರ 1 ಮತ್ತು 5 ಗಳನ್ನು ನೋಡಿದಾಗ ಅವವುಗಳ ಬೀಗ ಹಾಕಿತ್ತು . ಹಾಗೆ ನೋಡಿದಾಗ ಸಂಜೆ 7.30 ಗಂಟೆಯಾಗಿತ್ತು . ಕೀಲಿ ಹಾಕಿದ ನಂತರ ಚಾವಿಯನ್ನು ನನ್ನ ಬಳಿ ಇಟ್ಟುಕೊಂಡಿರುತ್ತೇನೆ . ಸದರಿ ಕೀಲಿ ಚಾವಿಯನ್ನು ನೋಡಿದರೆ ನಾನು ಗುರುತಿಸಬಲ್ಲೆ. ದಿಃ 29-10-2018 ರಂದು ಬೆಳಿಗ್ಗೆ 7.30 ಗಂಟೆಗೆ ನಮ್ಮ ಸಿಬ್ಬಂದಿಯವರಾದ ರವಿ ಲಮಾಣಿ ರವರು ನನಗೆ ಫೋನ್ ಮಾಡಿ 1 ಮತ್ತು 5 ನೇ ರೂಂ ನ ಕೀಲಿ ಮುರಿದು ಕಳ್ಳತನವಾಗಿರುತ್ತದೆ ಎಂದು ಹೇಳಿರುತ್ತಾರೆ . ನಮ್ಮ ಶಾಲೆಯಲ್ಲಿ ರವಿ ಲಮಾಣಿ ರವರಿಗೆ ನಮ್ಮ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ನೀಲಮ್ಮ ಬಾರ್ಕಿ ಎಂಬ ಆಯಾ ತಿಳಿಸಿರುತ್ತಾಳೆ . ಬೇರೆಯವರು ನನಗೆ ವಿಷಯ ತಿಳಿಸಿದ ಕಾರಣ ನನಗೆ ಘಟನೆ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಆ ಕಾರಣದಿಂದ ನಾನು ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಾನೂನು ಪದವಿದರನಾಗಿರುತ್ತೇನೆ . ನಿಪಿ-1 ದೂರನ್ನು ಪೋಲಿಸ್ ಠಾಣೆಯಲ್ಲಿ ಬೆರಳಚ್ಚು ಮಾಡಿರುತ್ತಾರೆ. ನಿಪಿ-1 ದೂರಿನಲ್ಲಿ ಪೋಲಿಸರು ಗಣಕೀಕೃತ ಮಾಡಿದ ದೂರನ್ನು ಸ್ವೀಕರಿಸಿಕೊಂಡಿರುತ್ತೇವೆ ಎಂದು ಹೇಳಿ ಶರಾ ಬರೆದಿರುತ್ತಾರೆ ಎಂದರೆ ನಿಜ. ನಾನು ದೂರನ್ನು ಕೊಡುವುದಕ್ಕಿಂತ ಮುಂಚೆ ನಮ್ಮ ಕಾಲೇಜಿನಲ್ಲಿ ಬೆರಳಚ್ಚು ಮಾಡಿಸಿದೆ ಆದರೆ ಪೋಲಿಸ್ ಠಾಣೆಗೆ ಹೋಗಿ ಪುನಃ ಗಣಕೀಕೃತ ಮಾಡಿಸಿರುತ್ತೇನೆ. ದೂರು ಕೊಡಲು ಠಾಣೆಗೆ ನಾನು ಒಬ್ಬನೇ

ಹೋಗಿರುತ್ತೇನೆ. ದೂರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಪೊಲಿಸ್ ಠಾಣೆಯಲ್ಲಿ ಎಷ್ಟು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಆದರೂ ಕೂಡಾ ಪೋಲಿಸರು ಅವರ ಮೇಲೆ ಸುಳ್ಳು ಕೇಸನ್ನು ಹಾಕಿ ಈ ಕೇಸಿನಲ್ಲಿ ಅವರನ್ನು ಕೊಟ್ಟೆಯಾಗಿ ಆರೋಪಿತರನ್ನಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯಲಿಲ್ಲಾದರೂ ಕೂಡಾ ನಾನು ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಿನನಿತ್ಯ ಸಂಜೆಯಾದ ನಂತರ ಶಾಲೆಯ ಬೀಗವನ್ನು ಹಾಕಿಕೊಂಡು ನಾನು ಮರಳಿ ರಾಣೆಬೇನ್ನೂರಿಗೆ ಬಂದಿರುತ್ತೇನೆ . ಆ ಕಾರಣದಿಂದ ನನಗೆ ಇವರೇ ಕಳ್ಳತನ ಮಾಡಿರುತ್ತಾರೆ ಎಂದು ಮಾಹಿತಿ ಇರಲಿಲ್ಲಾದರೂ ಕೂಡಾ ಪೋಲಿಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿ ಹಾಗು ಸಿಬ್ಬಂದಿಯವರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಓ ಹೇ ಕೇ ಸರಿ ಇದೆ. ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.